ಸದನ ಸಮಿತಿ ಸೂಚನೆಯಂತೆ ಮತ್ತು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ರವರ ಆದೇಶ ಸಂಖ್ಯೆ: SSLR/EST/TD/GC-025/2015-16 ರಂತೆ ರೀ.ಸ.ನಂ. 18 ರ ಕೆರೆ ಬಾಬ್ತು ಅಳತೆಯಿಂದ ತಯಾರಿಸಿದ ನಕ್ಷೆ




| ಕ್ರ.ಸಂ | ಬ್ಲಾಕ್ ನಂ | ಒತ್ತುವರಿದಾರರ ಹೆಸರು | ಒತ್ತುವರಿ ಸ್ವರೂಪ | ವಿಸ್ತೀರ್ಣ ಎ-ಗುಂ | ಷರಾ |
|---|---|---|---|---|---|
| 1 | I | ದುಕ್ಕಿಣಿ ಕೋಂ ಎನ್.ನಾಗರಾಜು | ಕೃಷಿ | 00-03.12 | |
| 2 | II | ಚಿಕ್ಕಮುನಿರಾಮಪ್ಪ,ಮುನಿಬಚ್ಚಪ್ಪ, ರಾಮಯ್ಯ, ಹನುಮಂತಪ್ಪ,ಕೃಷ್ಣಪ್ಪ | ಕೃಷಿ | 00-04.08 | |
| 3 | III | ಪಹಣಿಯಂತೆ ಸ.ನಂ 17/3 ರ ಖಾತೇದಾರರಾದ ಬೈರಪ್ಪ ಬಿನ್ ಬಚ್ಚಯ್ಯ ಮತ್ತು ಇತರರು | ಕೃಷಿ | 00-08.08 | |
| 4 | IV | ಪಹಣಿಯಂತೆ ಸ.ನಂ 17/1 ರ ಖಾತೇದಾರರಾದ ಅಕ್ಕಯ್ಯಮ್ಮ ಕೋಂ ಬಚ್ಚಯ್ಯ ಮತ್ತು ಇತರರು | ಕೃಷಿ | 00-00.12 | |
| 5 | V | ಶಿವಶಾಂತಿ ಭವನಂ ಅಪಾರ್ಟ್‌ಮೆಂಟ್ (ಶಿವಾರೆಡ್ಡಿ) | ಕಟ್ಟಡ | 00-01.04 | |
| 6 | VI | ಸಾಯಿ ಪ್ಯಾರಾಗಾನ್ ಮೆಡೋಸ್ | ಎಸ್.ಟಿ.ಪಿ | 00-01.04 | |
| 7 | VII | ಈದಾರ ವೆಂಕಟರೆಡ್ಡಯ್ಯ, ರಾಮಚಂದ್ರ, ಶಿವಕುಮಾರನ್, ಕೃತಿಕ ರಾಧಕೃಷ್ಣನ್ | ನಿವೇಶನ | 00-03.08 | |
| 8 | VIII | ಮುನಿವೆಂಕಟಮ್ಮ ಕೋಂ ಮುನಿಯಪ್ಪ | ನಿವೇಶನ | 00-03.08 | ಪಹಣಿಯಲ್ಲಿ ಬಿಎಂಎಸ್ ಎಲ್ ಸೊಸೈಟಿಗೆ ಭೂಸ್ವಾಧೀನವಾಗಿದೆ ಎಂದು ನಮೂದಾಗಿರುತ್ತದೆ. |
| 9 | IX | ರೋಹಿಣಿರಾವ್ ಕೋಂ ನಾಗೇಶ್‌ರಾವ್ | ಕಟ್ಟಡ | 00-01.12 | ಬಿಎಂಎಸ್ ಎಲ್ ಹೌಸಿಂಗ್ ಸೊಸೈಟಿಯಿಂದ ನಿವೇಶನ ಹಂಚಿಕೆಯಾಗಿರುತ್ತದೆ. |
| 10 | X | ರಸ್ತೆ | ರಸ್ತೆ | 00-23 | |

| ಒಟ್ಟು ವಿವರ | ವಿಸ್ತೀರ್ಣ ಎ-ಗುಂ |
|---|---|
| ಒಟ್ಟು ಖಾಸಗಿ ಒತ್ತುವರಿ | 00-28.12 |
| ಒಟ್ಟು ಸರ್ಕಾರಿ ಒತ್ತುವರಿ | 00-23.00 |
| ಒಟ್ಟು ಖುಲ್ಲಾ ಇರುವ ವಿಸ್ತೀರ್ಣ | 26-23.04 |
| ಸರ್ವೇ ನಂಬರಿನ ಒಟ್ಟು ವಿಸ್ತೀರ್ಣ | 27-35.00 |

ತಯಾರಿಸಿದವರು

ಭೂಮಾಪಕರು
ಬೆಂಗಳೂರು ಪೂರ್ವ ತಾಲ್ಲೂಕು

ಪರಿಶೀಲಿಸಿದವರು

ತಪಾಸಕರು

ಗ್ರಾಮ ಲೆಕ್ಕಾಧಿಕಾರಿ
ವರ್ತೂರು ಹೋಬಳಿ
ಬೆಂಗಳೂರು ಪೂರ್ವ ತಾಲ್ಲೂಕು

ರಾಜಸ್ವ ನಿರೀಕ್ಷಕರು

ಇಲಾಖೆ/ಪ್ರಾಧಿಕಾರ
Assistant Executive Engineer
No. 1, East Sub Division,
Bangalore Development Authority
H.S.R. Layout, B.D.A. Complex
Bangalore

ದೃಢೀಕರಿಸಿದೆ

ಭೂದಾಖಲೆಗಳ ಸಹಾಯಕ ನಿರ್ದೇಶಕರು(ಪ್ರ)
ಬೆಂಗಳೂರು ಪೂರ್ವ ತಾಲ್ಲೂಕು

Scanned with CamScanner

ಕರ್ನಾಟಕ ಸರ್ಕಾರ

**ತಹಶೀಲ್ದಾರ್ ರವರ ಕಾರ್ಯಾಲಯ, ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ.**

ಸಂಖ್ಯೆ.ಎನ್.ಸಿ.ಆರ್./ಸಿ.ಆರ್.21/19-20 ದಿನಾಂಕ;31-01-2024

ರವರಿಗೆ,

ಕಾರ್ಯಪಾಲಕ ಅಭಿಯಂತರರು,
ಮಹದೇವಪುರ ವಿಭಾಗ,
ಫಿನಿಕ್ಸ್ ಮಾರ್ಕೆಟ್ ಸಿಟಿ ಎದುರು,
ವೈಟ್‌ಫೀಲ್ಡ್ ಮುಖ್ಯರಸ್ತೆ, ಮಹದೇವಪುರ.

ಮಾನ್ಯರೆ,

ವಿಷಯ;- ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವಂತಹ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ;- 1.ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 38401/2014 ಮತ್ತು 11044/2018(ಎಲ್.ಬಿ-ಆರ್.ಇ.ಎಸ್-ಪಿ.ಐ.ಎಲ್) ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿ: 21-07-2023, 01-08-2023 ಮತ್ತು 04-09-2023 ರಂದು ನೀಡಿರುವ ದೈನಂದಿನ ಆದೇಶ / ನಿರ್ದೇಶದಂತೆ.
2.ಮಾನ್ಯ ಸರ್ಕಾರಿ ಆದೇಶ ಸಂಖ್ಯೆ.ನ.ಅ.ಇ 250 ಎಂ.ಎನ್.ವೈ 2018 (ಭಾಗ-3) ಬೆಂಗಳೂರು. ದಿ: 28-08-2023 (1)
3.ತಮ್ಮ ಕಛೇರಿ ಪತ್ರ ಸಂಖ್ಯೆ.ಬಿಬಿಎಂಪಿ/ಕಾಅ/ಮವಿ/870/2023-24 ದಿ: 18-11-2023
4.ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ದಿ: 31-01-2024

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 38401/2014 ಮತ್ತು 11044/2018(ಎಲ್.ಬಿ-ಆರ್.ಇ.ಎಸ್-ಪಿ.ಐ.ಎಲ್) ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿ: 21-07-2023, 01-08-2023 ಮತ್ತು 04-09-2023 ರಂದು ನೀಡಿರುವ ದೈನಂದಿನ ಆದೇಶ / ನಿರ್ದೇಶದಂತೆ, ಉಲ್ಲೇಖ(2) ರ ಮಾನ್ಯ ಸರ್ಕಾರಿ ಆದೇಶ ಸಂಖ್ಯೆ.ನ.ಅ.ಇ 250 ಎಂ.ಎನ್.ವೈ 2018 (ಭಾಗ-3) ಬೆಂಗಳೂರು. ದಿ: 28-08-2023 (1) ರಲ್ಲಿ ಸರ್ಕಾರವು ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿಗಳನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಗೊತ್ತುಪಡಿಸಿದ ಅಧಿಕಾರಿಗಳನ್ನು ಅಧಿಕೃತಗೊಳಿಸಿ ಆದೇಶವನ್ನು ಹೊರಡಿಸಿರುತ್ತಾರೆ.

Scanned with CamScanner

ಉಲ್ಲೇಖ(3) ರ ಪತ್ರದಲ್ಲಿ ವರ್ತೂರು ಹೋಬಳಿ, ಸಿದ್ದಾಪುರ ಗ್ರಾಮದ ಸ.ನಂ.18 ರ ಕೆರೆಯನ್ನು ಸ್ಥಳೀಯ ಕಂದಾಯಾಧಿಕಾರಿಗಳೊಂದಿಗೆ ಹಾಗೂ ಬಿಬಿಎಂಪಿ ರವರೊಂದಿಗೆ ಸ್ಥಳ ತನಿಖೆ ಕೈಗೊಂಡು, ಅಳತೆ ಮಾಡಿ ನಕ್ಷೆಯೊಂದಿಗೆ ಒತ್ತುವರಿದಾರರ ಒತ್ತುವರಿಗಳನ್ನು ಗುರುತಿಸಿ, ಸಲ್ಲಿಸಲು ಸೂಚಿಸಿರುವ ಮೇರೆಗೆ, ಉಲ್ಲೇಖ(4) ರಂತೆ ಸ್ಥಳೀಯ ಕಂದಾಯಾಧಿಕಾರಿಗಳು, ಬಿಬಿಎಂಪಿ ಅಧಿಕಾರಿಗಳ ಸಮಕ್ಷಮ ಜಂಟಿ ಅಳತೆ ಮಾಡಿ, ನಕ್ಷೆ ತಯಾರಿಸಿ, ಒತ್ತುವರಿದಾರರ ವಿವರಗಳೊಂದಿಗೆ ನಕ್ಷೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸಿದ್ದಾಪುರ ಗ್ರಾಮದ ಸ.ನಂ.18 ರ ಕೆರೆಯ ಒತ್ತುವರಿದಾರರ ವಿವರದೊಂದಿಗೆ ತಯಾರಿಸಿರುವ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಟ್ಟು ನಿಯಮಾನುಸಾರ ಕ್ರಮವಹಿಸಲು ಮುಂದಿನ ಕ್ರಮಕ್ಕೆ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು,
ಕೆ.ಆರ್.ಪುರ.

ಪ್ರತಿಯನ್ನು:-

1. ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ.
2. ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು-2 ಮತ್ತು 3, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ.
3. ವಲಯ ಆಯುಕ್ತರು, ಮಹದೇವಪುರ ವಲಯ, ಮಹದೇವಪುರ ರವರಿಗೆ.
4. ವಲಯ ಜಂಟಿ ಆಯುಕ್ತರು,ಮಹದೇವಪುರ ವಲಯ, ರವರಿಗೆ.
5. ಮುಖ್ಯ ಅಭಿಯಂತರರು, ಬಿಬಿಎಂಪಿ ಮಹದೇವಪುರ ವಲಯ ರವರಿಗೆ.
6. ಕಾರ್ಯಪಾಲಕ ಅಭಿಯಂತರರು (ಕೆರೆಗಳು-ಮಹದೇವಪುರ) 3ನೇ ಮಹಡಿ, ಎನ್.ಆರ್.ಚೌಕ ಬಿಬಿಎಂಪಿ, ಬೆಂಗಳೂರು ರವರಿಗೆ.
7. ಮಾನ್ಯ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರಿಗೆ.
8. ಕಛೇರಿ ಪ್ರತಿ.

6/2/24

ರವಾನೆ ಗುಮಾಸ್ತರು
ತಹಶೀಲ್ದಾರ್‌ರವರ ಕಛೇರಿ
ಬೆಂಗಳೂರು ಪೂರ್ವ ತಾಲ್ಲೂಕು
ಕೃಷ್ಣರಾಜಪುರ

Scanned with CamScanner